ಗಿರೀಶ ಕಾಸರವಳ್ಳಿಯವರ ಸಿನಿಮಾ 'ಗುಲಾಬಿ ಟಾಕೀಸ್'ನಲ್ಲೂ ಒಂದು ಟ್ರಂಕಿದೆ. ಗುಲಾಬಿ ಟ್ರಂಕೊಂದರ ಮೇಲೆ ಕುಳಿತಿದ್ದಾಳೆ. ಅವಳ ಕಣ್ಣುಗಳಲ್ಲಿನ ವಿಷಾದವೇನೊ ಕಾಣಿಸುತ್ತದೆ. ಆದರೆ, ಅವಳು ಕುಳಿತಿರುವ ಟ್ರಂಕ್‌ನಒಳಗಿರುವುದನ್ನು ಊಹಿಸಿಕೊಳ್ಳುವುದು ಹೇಗೆ? ಕಡಲ ಕಿನಾರೆಯ ಪುಟ್ಟ ಊರಿನ ಎಲ್ಲ ತಾಯಂದಿರ ಹೆರಿಗೆಗೆ ಒದಗಿಬರುವ ಮಹಾತಾಯಿ ಈ ಗುಲಾಬಿ. ಅವಳ ಮನೆಗೆ ಬರುವ ಟೀವಿ ಊರನ್ನೂ ಸಂಬಂಧಗಳನ್ನೂ ಮನೆಗೆ ಕರೆತರುತ್ತದೆ. ದೂರ ದೇಶದಲ್ಲೆಲ್ಲೋ ಯುದ್ಧವಾದರೆ, ಆ ಯುದ್ಧದ ಬಿಸಿ ಗುಲಾಬಿಗೆ ತಟ್ಟುತ್ತದೆ. ತಾನು ಜನಿಸಿದ, ಬಾಳುತ್ತಿರುವ ನೆಲದಲ್ಲಿ ಅವಳು ಇದ್ದಕ್ಕಿದ್ದಂತೆ ಅನ್ಯಳಾಗಿಬಿಡುತ್ತಾಳೆ. ಗುಲಾಬಿ ಒಂಟಿತನ, ಅಭದ್ರತೆ ಎದುರಿಸುತ್ತಾಳೆ. ವರ್ತಮಾನವನ್ನು ಆವರಿಸಿಕೊಂಡಿರುವ ಧಾರ್ಮಿಕ ದ್ವೇಷದ ಧಗೆಯನ್ನು ಗುಲಾಬಿ ರೂಪಕದ ಮೂಲಕ ಕಾಸರವಳ್ಳಿ ಅದ್ಭುತವಾಗಿ ಕಟ್ಟಿಕೊಡುತ್ತಾರೆ.

ಗುಲಾಬಿಯ ಜೊತೆಗೆ ಎಸ್. ದಿವಾಕರ್ ಅವರ 'ಪೆಟ್ಟಿಗೆ' ಎನ್ನುವ ಕಥೆ ನೆನಪಾಗುತ್ತದೆ. ಈ ಕಥೆಯ ನಾಯಕ ಪಂಡಿತ್ ಶಿವರುದ್ರಯ್ಯ ಬಸವನಾಳಮಠ ಪ್ರಖ್ಯಾತ ಸಂಗೀತ ವಿದ್ವಾಂಸ. ಆತ ಪೆಟ್ಟಿಗೆಗಳ ಹುಚ್ಚ. ಅವನಿಗೆ ಪ್ರತಿಯೊಂದಕ್ಕೂ ಚಂದದ ಪೆಟ್ಟಿಗೆಯೇ ಆಗಬೇಕು. ಆ ಹುಚ್ಚು ಕಥೆಯಲ್ಲಿ ಎಷ್ಟೊಂದು ಚಿತ್ರವತ್ತಾಗಿ ಮೂಡಿದೆ ನೋಡಿ: ''ಅವರು ಹೋದೆಡೆಯಲ್ಲೆಲ್ಲ ಜತೆಗಿರಬೇಕಾಗಿದ್ದ ನೀರು ತುಂಬಿದ ತಾಮ್ರದ ಬಿಂದಿಗೆಗೊಂದು ಪೆಟ್ಟಿಗೆಯಂತೂ ಸರಿಯೇ. ಅದರ ಜೊತೆಗೆ ಅವರ ತಾನ್‌ಪುರಕ್ಕೆ ಒಂದು ಪೆಟ್ಟಿಗೆ, ದೇವರ ಪಟಗಳಿಗೆ ಒಂದು ಪೆಟ್ಟಿಗೆ, ಛತ್ರಿಗೊಂದು ಪೆಟ್ಟಿಗೆ, ಗ್ಯಾಸ್ ಸ್ಟೊವ್‌ಗೆ ಒಂದು ಪೆಟ್ಟಿಗೆ, ಒಂದರೊಳಗೊಂದು ಜೋಡಿಸಬಹುದಾದ ಏಳು ತಪ್ಪಲೆಗಳಿಗೆ ಒಂದು ಪೆಟ್ಟಿಗೆ, ಒಂದು ಬಾಣಲೆ, ಮೂರು ತಟ್ಟೆ, ಮೂರು ಲೋಟಗಳಿಗೆ ಒಂದು ಪೆಟ್ಟಿಗೆ, ರೈಲು ಚೆಂಬಿಗೂ ಒಂದು ಪೆಟ್ಟಿಗೆ. ಅಲ್ಲದೆ ಬಟ್ಟೆಬರೆ, ಕ್ಷೌರದ ಹತಾರಗಳು, ಸೋಪು, ಹಲ್ಲುಪುಡಿ, ಇತ್ಯಾದಿ ತುಂಬಿಕೊಂಡ ಒಂದು ಸೂಟ್‌ಕೇಸ್ ಇರುತ್ತಿತ್ತಲ್ಲ, ಅದನ್ನೂ ಒಂದು ಪೆಟ್ಟಿಗೆಯೆನ್ನಿ ಬೇಕಾದರೆ. ಸಾಲದ್ದಕ್ಕೆ ಸದಾ ಪಂಡಿತ್‌ರ ಬಳಿ ಎಲೆ ಅಡಿಕೆ ಸುಣ್ಣ ತಂಬಾಕಿನ ಒಂದು ಪುಟ್ಟ ಬೆಳ್ಳಿ ಪೆಟ್ಟಿಗೆಯಂತೂ ಇದ್ದೇ ಇರುತ್ತಿತ್ತು. ಇನ್ನು ಆ ಒಂದೊಂದು ಪೆಟ್ಟಿಗೆಗೂ ಒಂದೊಂದು ಬೀಗ. ಕಡೇಕಾರು ಶ್ರೀಧರ ಭಟ್ಟ ಆ ಎಲ್ಲ ಬೀಗಗಳ ಬೀಗದೆಸಳಿಗೆಂದೇ ವಿಶೇಷವಾದೊಂದು ಪೆಟ್ಟಿಗೆಯನ್ನು ತಯಾರಿಸಿದ್ದ''. ಹೀಗೆ ಪೆಟ್ಟಿಗೆಗಳ ಲೋಕವೊಂದನ್ನು ಕಟ್ಟಿಕೊಂಡಿರುವ ಕಥಾನಾಯಕ ಕಛೇರಿಯೊಂದನ್ನು ಮುಗಿಸಿಕೊಂಡು ರೈಲಿನಲ್ಲಿ ಬರುವಾಗ ಹಾಡುವ ಹುಕಿಗೊಳಗಾಗುತ್ತಾನೆ. ಅದರ ಪರಿಣಾಮ ದಾರುಣವಾಗಿದೆ: ''ಪಂಡಿತ್ ಶಿವರುದ್ರಯ್ಯ ಬಸವನಾಳಮಠರಿಗೆ ಇದ್ದಕ್ಕಿದ್ದಂತೆ ರೈಲು ಓಡುತ್ತಿರುವ ಆ ಸದ್ದೇ ಒಂದು ಬಗೆಯ ಆಧಾರ ಶ್ರುತಿಯಾಯಿತು. ಅದನ್ನು ಕಿವಿಗೆ ತುಂಬಿಕೊಳ್ಳುತ್ತ ಕಣ್ಣು ಮುಚ್ಚಿಕೊಂಡರು. ಈಗ ಮಿಂಚಿ ಮಾಯವಾಗುತ್ತಿದ್ದ ಬೆಳಕೂ ಇಲ್ಲವಾಗಿ ಕತ್ತಲಷ್ಟೇ ಮೌನವನ್ನು ಉದ್ದೀಪಿಸುವಂತಿತ್ತು. ಅವರು ಮನಸ್ಸಿನಲ್ಲೇ ರೈಲಿನ ಆ ಆಧಾರ ಶ್ರುತಿಯ ಬೆನ್ನುಹತ್ತಿ ತಮ್ಮ ಕಲ್ಪನೆಯ ಮೂಲೆಮೊಡಕುಗಳನ್ನು ತಡವತೊಡಗಿದರು. ಅದಾಗ ಕತ್ತಲೆಯ ಪಾತಾಳದೊಳಗಿಂದ ಷಡ್ಜವೊಂದು ಕೂಗಿಕೊಂಡಂತಾಯಿತು. ಆಗ ರಾತ್ರಿಯ ಕೊನೆಯ ಪ್ರಹರ. ಆ ಷಡ್ಜವನ್ನೇ ಹಿಡಿದುಬಿಟ್ಟರು. ಅದನ್ನು ಸ್ವಲ್ಪ ಹೊತ್ತು ಹತ್ತಿಯನ್ನು ಹಿಂಜುವಂತೆ ತಮ್ಮ ಕೊರಳಿನಲ್ಲಿ ಹಿಂಜಿದರು. ಆಮೇಲೆ ಅದಕ್ಕೆ ಸಂವಾದಿಯಾದ ಕೋಮಲ ರಿಷಭ ಕೂಡಿಕೊಂಡಿತು. ಯಾರೋ ಎಲ್ಲಿಯೋ ಈ ಸ್ವರವನ್ನು ಮೀಟದೆ ಬೆಳಗಾಗುವುದಾದರೂ ಹೇಗೆ ಎನ್ನಿಸಿತು. ಆಮೇಲೆ ಒಂದೊಂದಾಗಿ ಇನ್ನೂ ಕೆಲವು ಸ್ವರಗಳು ಕೂಡಿಕೊಂಡುವು. ಯಾವುದಿದು ಹೊಸ ರಾಗ? ಅವರು ತುಟಿಯಾಡಿಸಿ